# ಕಾವಾಲವಾಡ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ತಾಂತ್ರಿಕ ಲೋಕದ ಅರಿವು



**ಹಳಿಯಾಳ:** ತಾಂತ್ರಿಕ ಶಿಕ್ಷಣದ ಕುರಿತು ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ, ಕಾವಾಲವಾಡದ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯ 34 ವಿದ್ಯಾರ್ಥಿಗಳು ಫೆ. 4ರಂದು ಇಲ್ಲಿನ ಕೆ.ಎಲ್. ಎಸ್. ವಿ.ಡಿ.ಐ.ಟಿ. ಕಾಲೇಜಿಗೆ ಶೈಕ್ಷಣಿಕ ಭೇಟಿ ನೀಡಿದರು. ಈ ಭೇಟಿಯ ಅವಧಿಯಲ್ಲಿ ವಿದ್ಯಾರ್ಥಿಗಳು ಇಂದಿನ ಆಧುನಿಕ ತಂತ್ರಜ್ಞಾನದ ವಿವಿಧ ಆಯಾಮಗಳ ಬಗ್ಗೆ ಪ್ರತ್ಯಕ್ಷ ಮಾಹಿತಿ ಪಡೆದುಕೊಂಡರು.

ಮಹಾವಿದ್ಯಾಲಯದ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ವಿದ್ಯಾರ್ಥಿಗಳು, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಿದ್ಧಪಡಿಸಿರುವ ವಿನೂತನ ಯೋಜನಾ ಕಾರ್ಯಗಳನ್ನು ಆಸಕ್ತಿಯಿಂದ ವೀಕ್ಷಿಸಿದರು. ವಿಶೇಷವಾಗಿ ಟಯೋಟಾ ಕಿರ್ಲೋಸ್ಕರ್ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಇಂಜಿನ್‌ನ ವಿವಿಧ ಬಿಡಿಭಾಗಗಳು ಮತ್ತು ಅವುಗಳ ಕಾರ್ಯನಿರ್ವಹಣೆಯ ಬಗ್ಗೆ ತಾಂತ್ರಿಕ ವಿವರಗಳನ್ನು ತಿಳಿದುಕೊಂಡರು. ಕಾಲೇಜಿನ ಮೇಲ್ಛಾವಣಿಯಲ್ಲಿ ಅಳವಡಿಸಲಾಗಿರುವ ಸೌರ ಫಲಕಗಳನ್ನು ವೀಕ್ಷಿಸಿದ ಅವರು, ಸೌರಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ವೈಜ್ಞಾನಿಕ ವಿಧಾನದ ಕುರಿತು ಮಾಹಿತಿ ಪಡೆದರು.

ಇದೇ ಸಂದರ್ಭದಲ್ಲಿ ಕೆ.ಎಲ್.ಎಸ್. ಪಿ.ಯು. ಕಾಲೇಜಿನ ಪ್ರಾಧ್ಯಾಪಕರಾದ ನಿಮಿಷಾ ಮತ್ತು ನಾಗರಾಜ ಅವರು ಹತ್ತನೇ ತರಗತಿಯ ನಂತರ ವಿದ್ಯಾರ್ಥಿಗಳ ಮುಂದಿರುವ ವಿವಿಧ ಶೈಕ್ಷಣಿಕ ಆಯ್ಕೆಗಳು ಮತ್ತು ಉಜ್ವಲ ಭವಿಷ್ಯದ ದಾರಿಗಳ ಕುರಿತು ಸಮಾಲೋಚನೆ ನಡೆಸಿದರು. ತಮ್ಮ ವಿದ್ಯಾರ್ಥಿಗಳಿಗೆ ಇಂತಹ ಮಹತ್ವದ ತಾಂತ್ರಿಕ ಅರಿವು ಮೂಡಿಸಿದ ವಿ.ಡಿ.ಐ.ಟಿ. ಮತ್ತು ಪಿ.ಯು. ಕಾಲೇಜಿನ ಆಡಳಿತ ಮಂಡಳಿಗೆ ಶಾಲೆಯ ಮುಖ್ಯೋಪಾಧ್ಯಾಪಕ ಸಾಂಬಾಜಿ ಕದಂ ಹಾಗೂ ಸುರೇಂದ್ರ ಬಿರ್ಜೆ ಅವರು ಕೃತಜ್ಞತೆ ಸಲ್ಲಿಸಿದರು.

ಮಹಾವಿದ್ಯಾಲಯದ ತರಬೇತಿ ಮತ್ತು ಉದ್ಯೋಗ ವಿಭಾಗದ ಸಂಚಾಲಕ ಪ್ರೊ. ನವೀನ್ ಹಿರೇಮಠ ಅವರು ಈ ಇಡೀ ಭೇಟಿಯ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಪ್ರೌಢಶಾಲಾ ಹಂತದಲ್ಲೇ ವಿದ್ಯಾರ್ಥಿಗಳು ನೂತನ ತಂತ್ರಜ್ಞಾನದ ಅರಿವು ಹೊಂದುವುದು ಅವರ ಮುಂದಿನ ವೃತ್ತಿಜೀವನಕ್ಕೆ ದಾರಿದೀಪವಾಗಲಿದೆ ಎಂದು ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಅವರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿ (ಉ.ಕ.)
sirsicity.mrc.gov.in
m
ಾಂಕ: 05-02-2026.

# ಪ್ರೌಢಶಾಲಾ ವಿದ್ಯಾರ್ಥಿಗಳು ವಿಡಿಐಟಿಗೆ ಭೇಟಿ



**ಹಳ್ಳಿಯ ಸಂದೇಶ ನ್ಯೂಸ್**

ಹಳಿಯಾಳ: ಕೆಎಲ್ಎಸ್ ವಿಡಿಐಟಿ ಹಳಿಯಾಳಕ್ಕೆ ಸರಕಾರಿ ಪ್ರೌಢಶಾಲೆ ಕಾವಾಲವಾಡ ದ 10ನೇ ತರಗತಿಯ 34 ವಿದ್ಯಾರ್ಥಿಗಳು ಫೆಬ್ರವರಿ 4 ರಂದು ಭೇಟಿ ನೀಡಿದರು. ಮಹಾ ವಿದ್ಯಾಲಯದ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ನೂತನ ತಂತ್ರಜ್ಞಾನದ ಮಾಹಿತಿ ಪಡೆದುಕೊಂಡರು. ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸಿದ್ದಪಡಿಸಿರುವ ಯೋಜನಾ ಕಾರ್ಯ ಗಳನ್ನು ವೀಕ್ಷಿಸಿದರು. ಟಯೋಟಾ ಕಿರ್ಲೋಸ್ಕರ್ ನ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡಿ ಇಂಜಿನ್ ಬಿಡಿ ಭಾಗದ ಕುರಿತಾಗಿ ತಿಳಿದುಕೊಂಡರು. ಮಹಾವಿದ್ಯಾಲಯದ ಮೇಲ್ಚಾವಣಿಗೆ ಅಳವಡಿಸಿರುವ ಸೌರ ಫಲಕಗಳನ್ನು ವೀಕ್ಷಿಸಿ, ಸೌರಶಕ್ತಿಯಿಂದ ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ವಿಧಾನದ ಕುರಿತಾಗಿ ಮಾಹಿತಿ ಹೊಂದಿದರು. ಕೆಎಲ್ಎಸ್ ಪಿಯು ಕಾಲೇಜಿನ ಪ್ರಾಧ್ಯಾಪಕರಾದ ನಿಮಫಾ ಹಾಗೂ ನಾಗರಾಜ ಇವರು ಹತ್ತನೇ ತರಗತಿಯ ನಂತರ ಕಲಿಕೆಗೆ ಇರುವ ವಿವಿಧ ಆಯ್ಕೆಗಳನ್ನು ತಿಳಿಸಿದರು. ತಮ್ಮ ವಿದ್ಯಾರ್ಥಿಗಳಿಗೆ ನೂತನ ತಂತ್ರಜ್ಞಾನದ ಅರಿವು ಮೂಡಿಸಿ, ಭವಿಷ್ಯದ ಕಲಿಕಾ ಅವಕಾಶಗಳ ಕುರಿತಾಗಿ ತಿಳಿಸಿದ ವಿಡಿಐಟಿ ಹಾಗೂ ಕೆಎಲ್ ಎಸ್ ಪಿಯು ಕಾಲೇಜಿಗೆ ತಾವು ಆಭಾರಿಯಾಗಿದ್ದೇವೆ ಎಂದು ಮುಖ್ಯೋಪಾಧ್ಯಾಪಕ ಸಾಂಬಾಜಿ ಕದಂ ಹಾಗೂ ಸುರೇಂದ್ರ ಬಿರ್ಜೆ ಹೇಳಿದ್ದಾರೆ. ಮಹಾವಿದ್ಯಾಲಯದ ಟ್ರೈನಿಂಗ್ ಹಾಗೂ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ನವೀನ್ ಹಿರೇಮಠ ಕಾರ್ಯಕ್ರಮ ಸಂಯೋಜಿಸಿದರು. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೂತನ ತಂತ್ರಜ್ಞಾನದ ಅರಿವು ಹೊಂದಲು ಈ ಭೇಟಿಯು ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರೌಢಶಾಲಾ ವಿದ್ಯಾರ್ಥಿಗಳು ವಿಡಿಐಟಿಗೆ ಭೇಟಿ



**ಕೊಂಕಣವಾಹಿನಿ ನ್ಯೂಸ್,**

**ಹಳಿಯಾಳ :** ಕೆಎಲ್ಎಸ್ ವಿಡಿಐಟಿ ಹಳಿಯಾಳಕ್ಕೆ ಸರಕಾರಿ ಪ್ರೌಢಶಾಲೆ ಕಾವಲವಾಡ ದ 10ನೇ ತರಗತಿಯ 34 ವಿದ್ಯಾರ್ಥಿಗಳು ಫೆಬ್ರವರಿ 4 ರಂದು ಭೇಟಿ ನೀಡಿದರು. ಮಹಾ ವಿದ್ಯಾಲಯದ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ನೂತನ ತಂತ್ರಜ್ಞಾನದ ಮಾಹಿತಿ ಪಡೆದುಕೊಂಡರು. ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಸಿದ್ದಪಡಿಸಿರುವ ಯೋಜನಾ ಕಾರ್ಯ ಗಳನ್ನು ವೀಕ್ಷಿಸಿದರು. ಟಯೋಟಾ ಕಿರ್ಲೋಸ್ಕರ್ ನ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡಿ ಇಂಜಿನ್ ಬಿಡಿ ಭಾಗದ ಕುರಿತಾಗಿ ತಿಳಿದುಕೊಂಡರು. ಮಹಾವಿದ್ಯಾಲಯದ ಮೇಲ್ಚಾವಣಿಗೆ ಅಳವಡಿಸಿರುವ ಸೌರ ಫಲಕಗಳನ್ನು ವೀಕ್ಷಿಸಿ, ಸೌರಶಕ್ತಿಯಿಂದ ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ವಿಧಾನದ ಕುರಿತಾಗಿ ಮಾಹಿತಿ ಹೊಂದಿದರು.

ಕೆಎಲ್ಎಸ್ಪಿ ಯು ಕಾಲೇಜಿನ ಪ್ರಾಧ್ಯಾಪಕರಾದ ನಿಂಫಾ ಹಾಗೂ ನಾಗರಾಜ ಇವರು ಹತ್ತನೇ ತರಗತಿಯ ನಂತರ ಕಲಿಕೆಗೆ ಇರುವ ವಿವಿಧ ಆಯ್ಕೆಗಳನ್ನು ತಿಳಿಸಿದರು. ತಮ್ಮ ವಿದ್ಯಾರ್ಥಿಗಳಿಗೆ ನೂತನ ತಂತ್ರಜ್ಞಾನದ ಅರಿವು ಮೂಡಿಸಿ, ಭವಿಷ್ಯದ ಕಲಿಕಾ ಅವಕಾಶಗಳ ಕುರಿತಾಗಿ ತಿಳಿಸಿದ ವಿಡಿಐಟಿ ಹಾಗೂ ಕೆಎಲ್ಎಸ್ಪಿ ಯು ಕಾಲೇಜಿಗೆ ತಾವು ಆಭಾರಿಯಾಗಿದ್ದೇವೆ ಎಂದು ಮುಖ್ಯೋಪಾಧ್ಯಾಪಕ ಸಾಂಬಾಜಿ ಕದಂ ಹಾಗೂ ಸುರೇಂದ್ರ ಬಿರ್ಜೆ ಹೇಳಿದ್ದಾರೆ. ಮಹಾವಿದ್ಯಾಲಯದ ಟ್ರೈನಿಂಗ್ ಹಾಗೂ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ನವೀನ್ ಹಿರೇಮಠ ಕಾರ್ಯಕ್ರಮ ಸಂಯೋಜಿಸಿದರು. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೂತನ ತಂತ್ರಜ್ಞಾನದ ಅರಿವು ಹೊಂದಲು ಈ ಭೇಟಿಯು ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರೌಢಶಾಲಾ ವಿದ್ಯಾರ್ಥಿಗಳಿಂದ ವಿಡಿಐಟಿಗೆ ಶೈಕ್ಷಣಿಕ ಭೇಟಿ



● **ತತ್ತ್ವನಿಷ್ಠ, ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳಕ್ಕೆ ಸರ್ಕಾರಿ ಪ್ರೌಢಶಾಲೆ ಕಾವಾಲವಾಡದ 10ನೇ ತರಗತಿಯ 34 ವಿದ್ಯಾರ್ಥಿಗಳು ಫೆಬ್ರವರಿ 4ರಂದು ಶೈಕ್ಷಣಿಕ ಭೇಟಿ ನೀಡಿದರು.

ಭೇಟಿಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮಹಾವಿದ್ಯಾಲಯದ ವಿವಿಧ ವಿಭಾಗಗಳನ್ನು ವೀಕ್ಷಿಸಿ, ನೂತನ ತಂತ್ರಜ್ಞಾನಗಳ ಕುರಿತ ಮಾಹಿತಿ ಪಡೆದುಕೊಂಡರು. ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ಯೋಜನಾ ಕಾರ್ಯಗಳನ್ನು ವೀಕ್ಷಿಸಿ, ತಾಂತ್ರಿಕ ಅಧ್ಯಯನದ ಪ್ರಾಯೋಗಿಕ ಅಂಶಗಳನ್ನು ಅರಿತುಕೊಂಡರು.

ಇದೇ ವೇಳೆ ಟಯೋಟಾ ಕಿರ್ಲೋಸ್ಕರ್ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡಿ, ಇಂಜಿನ್‌ನ ಬಿಡಿ ಭಾಗಗಳು ಹಾಗೂ ಅವುಗಳ ಕಾರ್ಯವಿಧಾನದ ಬಗ್ಗೆ ವಿವರವಾದ ಮಾಹಿತಿ ಪಡೆದರು. ಅಲ್ಲದೇ ಮಹಾವಿದ್ಯಾಲಯದ ಮೇಲ್ಛಾವಣಿಯಲ್ಲಿ ಅಳವಡಿಸಿರುವ ಸೌರ ಫಲಕಗಳನ್ನು ವೀಕ್ಷಿಸಿ, ಸೌರಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುವ ವಿಧಾನವನ್ನು ತಿಳಿದುಕೊಂಡರು.

ಕೆಎಲ್‌ಎಸ್ ಪಿಯು ಕಾಲೇಜಿನ ಪ್ರಾಧ್ಯಾಪಕರಾದ ನಿಮಘಾ ಮತ್ತು ನಾಗರಾಜ ಅವರು ಹತ್ತನೇ ತರಗತಿಯ ನಂತರ ಲಭ್ಯವಿರುವ ವಿವಿಧ ಶೈಕ್ಷಣಿಕ ಆಯ್ಕೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಈ ಶೈಕ್ಷಣಿಕ ಭೇಟಿಯಿಂದ ವಿದ್ಯಾರ್ಥಿಗಳಲ್ಲಿ ನೂತನ ತಂತ್ರಜ್ಞಾನಗಳ ಅರಿವು ಮೂಡಿದ್ದು, ಭವಿಷ್ಯದ ಕಲಿಕಾ ಅವಕಾಶಗಳ ಕುರಿತು ಸ್ಪಷ್ಟತೆ ದೊರೆತಿದೆ ಎಂದು ಸರ್ಕಾರಿ ಪ್ರೌಢಶಾಲೆ ಕಾವಾಲವಾಡದ ಮುಖ್ಯೋಪಾಧ್ಯಾಪಕರಾದ ಸಾಂಬಾಜಿ ಕದಂ ಮತ್ತು ಸುರೇಂದ್ರ ಬಿರ್ಜೆ ತಿಳಿಸಿದ್ದಾರೆ.

ಕಾರ್ಯಕ್ರಮವನ್ನು ಮಹಾವಿದ್ಯಾಲಯದ ಟ್ರೈನಿಂಗ್ ಮತ್ತು ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ನವೀನ್ ಹಿರೇಮಠ ಸಂಯೋಜಿಸಿದ್ದರು. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಾಂತ್ರಿಕ ಜ್ಞಾನ ವಿಸ್ತರಣೆಗೆ ಈ ಭೇಟಿ ಅತ್ಯಂತ ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.